# ಸಮಾಜದ ಸಂಪತ್ತು!

■ ಪ್ರವೀಣ ಕುಲಕರ್ಣಿ

ನೀವೊಂದು ವೇಳೆ ಷೇರು ಮಾರುಕಟ್ಟೆಯಲ್ಲಿ ಆಸಕ್ತರಾಗಿದ್ದರೆ 'ಜೀರೊಧಾ' ಎಂಬ ಕಂಪನಿಯ ಕುರಿತು ನೀವು ಕೇಳಿಯೇ ಕೇಳಿರುತ್ತೀರಿ. ಈ ಕಂಪನಿಯನ್ನು ನಿಮಗೆ ಸರಳವಾಗಿ ಪರಿಚಯಿಸುವುದಾದರೆ, ಇದೊಂದು ಷೇರು ದಲ್ಲಾಳಿ ಸಂಸ್ಥೆ. ಬೆಂಗಳೂರಿನ ಕಾಮತ್ ಸಹೋದರರು 2010ರಲ್ಲಿ ಈ ಕಂಪನಿಯನ್ನು ಸ್ಥಾಪಿಸಿದರು. ಇದೀಗ ಜಗತ್ತಿನ ಎಲ್ಲ ಭಾಗಗಳಲ್ಲೂ 'ಜೀರೊಧಾ' ಹೆಸರು ಚಿರಪರಿಚಿತ. ಈಗೇಕೆ ಇದೆಲ್ಲ ವಿಚಾರ ಎನ್ನುವ ಪ್ರಶ್ನೆ ನಿಮ್ಮನ್ನು ಕಾಡುತ್ತಿದೆಯೇ? ಅದಕ್ಕೂ ಉತ್ತರ ಸಿದ್ಧವಿದೆ. ಭಾರತದ ಅತ್ಯಂತ ಸಿರಿವಂತ ವ್ಯಕ್ತಿಗಳಲ್ಲಿ ಒಬ್ಬರೆನಿಸಿದ್ದಾರೆ 'ಜೀರೊಧಾ' ಸ್ಥಾಪಕರಲ್ಲಿ ಒಬ್ಬರಾಗಿರುವ ನಿಖಿಲ್ ಕಾಮತ್. ಇಷ್ಟಾದರೂ ನಿಖಿಲ್ ಕುರಿತು ಪ್ರಸ್ತಾಪ ಮಾಡುವ ಅಗತ್ಯವಿರಲಿಲ್ಲ. ತಮ್ಮ ಸಂಪತ್ತಿನ ಶೇ. 50ರಷ್ಟು ಭಾಗವನ್ನು ಸಮಾಜದ ಒಳಿತಿಗಾಗಿ ಧಾರೆ ಎರೆಯಲು ಅವರು ನಿರ್ಧರಿಸಿದ್ದಾರೆ.

ಸಂಪತ್ತು ಉಳ್ಳವರು ನಮ್ಮ ದೇಶದಲ್ಲಿ ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಜನ ಸಿಗುತ್ತಾರೆ. ಆದರೆ, ಇರುವ ಸಂಪತ್ತನ್ನು ಎಷ್ಟು ಜನ ಹೀಗೆ ಸಮಾಜದ ಒಳಿತಿಗಾಗಿ ಖರ್ಚು ಮಾಡಲು ಸಿದ್ಧರಿದ್ದಾರೆ. ನಿಖಿಲ್ ಅವರ ಹಿರಿಮೆ ಇರುವುದೇ ಇಲ್ಲಿ. ಹವಾಮಾನ ಬದಲಾವಣೆ ತೀವ್ರತೆಯನ್ನು ಕಡಿಮೆ ಮಾಡಲು, ಬಡವರಿಗೆ ಶಿಕ್ಷಣ ಹಾಗೂ ಆರೋಗ್ಯದ ವ್ಯವಸ್ಥೆ ಮಾಡಲು ತಮ್ಮ ಸಂಪತ್ತು ವಿನಿಯೋಗ ಆಗಬೇಕು ಎನ್ನುವ ನಿಖಿಲ್, ಸಿರಿವಂತರ ಸಾಲಿನಲ್ಲಿ ವಿಶಿಷ್ಟ ವ್ಯಕ್ತಿಯಾಗಿ ಗೋಚರಿಸುತ್ತಾರೆ.

ಕಾಮತ್ ಸಹೋದರರಲ್ಲಿ ನಿಖಿಲ್ ಅವರೇ ಕಿರಿಯ. 2021ರಲ್ಲಿ ಅವರು ಬಿಲಿಯನೇರ್ (ಶತಕೋಟಿ ಒಡೆಯ) ಎಂದು ಗುರ್ತಿಸಿಕೊಂಡಾಗ ಅವರಿಗೆ ಕೇವಲ 34 ವರ್ಷ. ಹತ್ತು ವರ್ಷಗಳಲ್ಲಿ ಅವರು ಸವೆಸಿದ ಹಾದಿ, ಏರಿದ ಎತ್ತರ ಇತರರಿಗೂ ಮಾದರಿ ಆಗಬಲ್ಲುದು. 'ಜೀರೊಧಾ' ಕಂಪನಿಯ ವಾಣಿಜ್ಯ ಯೋಜನಾ ವಿಭಾಗವನ್ನು ಮುನ್ನಡೆಸುವ ನಿಖಿಲ್‌ಗೆ ಬ್ಯುಸಿನೆಸ್ ವ್ಯಕ್ತಿತ್ವ ರಕ್ತಗತವಾಗಿ ಬಂದಿದೆಯೇನೋ. ಹದಿನಾಲ್ಕರ ಹರೆಯದ ಹುಡುಗನಾಗಿದ್ದಾಗ ಬಳಕೆಯಾದ ಮೊಬೈಲ್‌ಗಳ ವಹಿವಾಟು ನಡೆಸುತ್ತಿದ್ದರಂತೆ. ಹಳೆಯ ಮೊಬೈಲ್‌ಗಳ ವಹಿವಾಟು ನಡೆಸುವುದಾದರೆ ಶಾಲೆಗೆ ಹೋಗುವುದು ನಿಲ್ಲುತ್ತದೆ ನೋಡು ಎಂದು ಅಮ್ಮ ಹಾಗೂ ಶಾಲೆಯ ಶಿಕ್ಷಕರು ಎಚ್ಚರಿಕೆ ನೀಡಿದರೆ, ಈ ಹುಡುಗ ಶಾಲೆಯ ಬದಲು ಮಾರುಕಟ್ಟೆಗೆ ಧುಮುಕುವುದನ್ನೇ ಆಯ್ಕೆ ಮಾಡಿಕೊಂಡರು! ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕೊನೆಗೂ ಹಾಜರಾಗದ ನಿಖಿಲ್, ತಮ್ಮ ಬದುಕಿನ ದಿಕ್ಕನ್ನೇ ತಿರುಗಿಸಿಬಿಟ್ಟರು.

ನಿಖಿಲ್‌ಗೆ ಇನ್ನೂ ಹದಿನೆಂಟು ತುಂಬಿರಲಿಲ್ಲ. ಅಷ್ಟರಲ್ಲಿಯೇ ಅವರು ಕಾಲ್ ಸೆಂಟರ್‌ವೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ನಿತ್ಯ ಒಂಬತ್ತು ಗಂಟೆ ಕೆಲಸ, ತಿಂಗಳಿಗೆ ಎಂಟು ಸಾವಿರ ರೂಪಾಯಿ ಸಂಬಳ. ಅಲ್ಲಿ ಕೆಲಸ ಮಾಡುತ್ತಲೇ 'ನಾನು ಏನಾದರೂ ಬ್ಯುಸಿನೆಸ್ ಮಾಡಬಹುದೇ' ಎಂದು ಅವರು ಯೋಚಿಸುತ್ತಲೇ ಇದ್ದರು. ಹೊಸ ಬ್ಯುಸಿನೆಸ್ ಮಾಡುವೆ ಎಂದು ಹಟ ಹಿಡಿದ ಹುಡುಗನನ್ನು ಹೇಗೆ ಬೆಂಬಲಿಸುವುದು, ದುಡ್ಡು ಕಳೆದುಕೊಂಡರೆ ಏನು ಗತಿ ಎಂದು ಕುಟುಂಬವರ್ಗದವರು ಅವರನ್ನು ಸಂಪೂರ್ಣವಾಗಿ ಬೆಂಬಲಿಸಲು ಹಿಂದೇಟು ಹಾಕಿದರು. ಆದರೆ, ನಿಖಿಲ್ ತಂದೆ ತಮ್ಮ ಬಳಿ ಇದ್ದ ಹಣವನ್ನು ಮಗನಿಗೆ ಬ್ಯುಸಿನೆಸ್ ಮಾಡುವುದಕ್ಕಾಗಿ ಕೊಡಲು ಒಪ್ಪಿದರು. ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಲೇ ಹೊಸತೇನಾದರೂ ಮಾಡಬಹುದೇ ಎಂದು ನಿಖಿಲ್ ಯೋಚಿಸುತ್ತಲೇ ಹೋದರು. ಅದರ ಫಲವಾಗಿಯೇ ಸಹೋದರ ನಿತಿನ್ ಜತೆ ಶುರುವಾಗಿದ್ದು 'ಜೀರೊಧಾ' ಕಂಪನಿ. ಕಾಲ್ ಸೆಂಟರ್‌ನಲ್ಲಿ ಸಿಕ್ಕ ಅನುಭವ ಅವರ ಹೊಸ ಕಂಪನಿಯನ್ನು ಮುನ್ನಡೆಸುವಲ್ಲಿ ಸಹಾಯಕ್ಕೆ ಬಂತು.



ಫೋರ್ಬ್ಸ್‌ನ ಇತ್ತೀಚಿನ ವರದಿ ಪ್ರಕಾರ, ನಿಖಿಲ್ ಅವರ ಈಗಿನ ಆಸ್ತಿ ಮೌಲ್ಯ 28 ಸಾವಿರ ಕೋಟಿ ರೂಪಾಯಿ. ಕಳೆದ ಒಂದೇ ವರ್ಷದಲ್ಲಿ 'ಜೀರೊಧಾ' ಕಂಪನಿ ಶೇ. 82ರಷ್ಟು ಪ್ರಗತಿ ಕಂಡಿದೆಯಂತೆ. 2094 ಕೋಟಿ ರೂಪಾಯಿ ಲಾಭವನ್ನೂ ಗಳಿಸಿದೆ. ತಮಗೆ ಬಂದ ಲಾಭಾಂಶದಲ್ಲಿ ಸಮಾಜಕ್ಕೆ ಹಿಂದಿರುಗಿ ನೀಡುವ ವಿಶಾಲ ಹೃದಯವನ್ನು ಕನ್ನಡದ ಈ ಹುಡುಗ ಹೊಂದಿದ್ದಾರೆ. ನಿಖಿಲ್ ಕಟ್ಟುವ ವಾಚ್ ಎಷ್ಟೊಂದು ಹಳೆಯದು ಎಂದರೆ ದ್ವಿತೀಯ ಯುದ್ಧದ ಸಮಯದಲ್ಲಿ ಅದು ಯಾರದೋ ಕೈಯಲ್ಲಿದ್ದ ವಾಚ್ ಆಗಿತ್ತು. ಹಳೆಯದರ ಮೇಲೂ ಅವರಿಗೆ ಮೋಹ. 'ದೊಡ್ಡ ಇತಿಹಾಸಕ್ಕೆ ಸಾಕ್ಷಿಯಾದ ಪುಟ್ಟ ಸಾಧನವೊಂದು ನನ್ನ ಕೈಯಲ್ಲಿರುವುದು ಹೆಮ್ಮೆ ಮೂಡಿಸುತ್ತದೆ' ಎನ್ನುತ್ತಾರೆ ಅವರು.

ಬೆಂಗಳೂರಿನ ಕಿಂಗ್‌ಫಿಷರ್ ಟವರ್ಸ್‌ನಲ್ಲಿ ಅವರು ಐಷಾರಾಮಿ ಬಂಗಲೆ ಹೊಂದಿದ್ದಾರೆ. ಏಳು ಸಾವಿರ ಚದರ ಅಡಿಗಳಷ್ಟು ವಿಶಾಲವಾದ ಅರಮನೆ ಅವರದು. ಕಪ್ಪುಬಣ್ಣದ ಕಾರುಗಳೆಂದರೆ ಅವರಿಗೆ ಪಂಚಪ್ರಾಣವಂತೆ. ಆಡಿ, ಪೋರ್ಶ್ ಕಾರುಗಳು ಅವರ ಗ್ಯಾರೇಜ್‌ನಲ್ಲಿವೆ. ಪುಟ್ಟ ವಯಸ್ಸಿನಲ್ಲೇ ದೊಡ್ಡ ಸಾಧನೆ ಮಾಡಿದ ಹೆಮ್ಮೆ ಅವರಲ್ಲಿದೆ. ಆ ಹೆಮ್ಮೆಯ ನಡುವೆಯೇ ಸಮಾಜಕ್ಕೆ ಮಿಡಿಯುವ ಮನಸ್ಸನ್ನೂ ಹೊಂದಿರುವುದು ಅವರ ವ್ಯಕ್ತಿತ್ವಕ್ಕೊಂದು ತುರಾಯಿ ಮೂಡಿಸಿದೆ. ಸಂಪತ್ತನ್ನು ಹಂಚುವ ವಿಷಯದಲ್ಲಿ ಬೆಂಗಳೂರು ನಗರವೇ ಮುಂಚೂಣಿಯಲ್ಲಿರುವುದು ನಮಗೆಲ್ಲ ಹೆಮ್ಮೆ. ಅಜೀಂ ಪ್ರೇಮ್‌ಜಿ, ನಂದನ್ ನಿಲೇಕಣಿ ಅವರೂ ಸಮಾಜಕ್ಕಾಗಿ ತಮ್ಮ ಸಂಪತ್ತನ್ನು ಬಿಟ್ಟುಕೊಡುವ ಮೂಲಕ ಹೆಸರಾದವರು. ಅವರ ಸಾಲಿಗೆ ನಿಖಿಲ್ ಮೂಲಕ ಹೊಸ ಪೀಳಿಗೆಯೊಂದು ಸೇರ್ಪಡೆಯಾಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65